**ಇಂದು ದಿನಾಂಕಃ 17-07-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲು ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ನಾನು ದ್ವಿತೀಯ ದರ್ಜೆ ಲೆಕ್ಕ ಸಹಾಯಕನಾಗಿ ಗ್ರಾಮ ಪಂಚಾಯತ, ತೇಲಕೂರ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ದೂರುದಾರರಿಗೆ ಹಾಗೂ ಅವರ ತಮ್ಮನಿಗೆ ಬೈದಿರುವ ನಿಡಿ-4 ರಲ್ಲಿ ಆಡಿಯೋ ರಿಕಾರ್ಡಿಂಗ ಇದೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಡಿ-4ರ ಆಡಿಯೋವನ್ನು ನ್ಯಾಯಾಲಯದಲ್ಲಿ ಪ್ಲೇ ಮಾಡಿಸಿ ಕೇಳಿದಾಗ ಸಾಕ್ಷಿ ಅದರಲ್ಲಿ ದೂರುದಾರರ ತಮ್ಮ ನನಗೆ ಬೈದಿರುವುದು ಇದೆ ಎಂದು ನುಡಿಯುತ್ತಾರೆ. ನಾನು ದೂರುದಾರರಿಗೆ ಕಿರುಕುಳ ನೀಡಿದಾಗ ದೂರುದಾರ ಹಾಗೂ ಅವರ ತಮ್ಮ ಕೇಳಲು ಬಂದಾಗ ಆಡಿಯೋ ರೇಕಾರ್ಡ ಆಗಿದೆ ಎಂದರೆ ಸರಿಯಲ್ಲ. ಶರಣಯ್ಯರವರು ಯಾವುದೇ ಹಲ್ಲೆ ಮಾಡಿಲ್ಲ ಮತ್ತು ಅವರು ಕೇಳಲು ಬಂದಾಗ ಆಡಿಯೋ ರೇಕಾರ್ಡ ಆಗಿದೆ ಎಂದೂ ಸೂಚಿಸಿದಾಗ ಸಾಕ್ಷಿ ಹಲ್ಲೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಈಗ ನಾನು ಪ್ರಭಾರಿ ಪಂಚಾಯಿತಿ ಅಭಿವೃದ್ದಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ ಎಂದರೆ ಸರಿ.

ನಾನು ನನ್ನ ಹೆಂಡತಿಗೆ ಮೊಬೈಲನ್ನು ಕೊಟ್ಟಿದ್ದೇನೆ ಎಂದರೆ ಸಾಕ್ಷಿ ಅವರು ಈಗ ಉಪಯೋಗಿಸುತ್ತಿರುವ ಮೊಬೈಲ ಸಹ ನಾನೇ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಾನು ನನ್ನ ಹೆಂಡತಿಗೆ ನೀಡಿದ ಮೊಬೈಲ ಜಾಸ್ತಿ ನನ್ನ ಹತ್ತಿರು ಇರುತ್ತಿತ್ತು ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಮೊಬೈಲ ನನ್ನ ಹತ್ತಿರ ಇರುವ ಕಾರಣ ನಾನೇ ಮೇಸೇಜ್‌ಗಳನ್ನು ನನ್ನ ಮೊಬೈಲಗೆ ಕಳುಹಿಸಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದೂರುದಾರರು ನನ್ನ ವಿರುದ್ದ 2ನೇ ಮದುವೆ ಮಾಡಿಕೊಂಡಿದ್ದಕ್ಕಾಗಿ ಸಲ್ಲಿಸಿದ ಪ್ರಕರಣ ಸಹ ಇದೆ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**